ಅಂತ ಕೇಳಿದವಳೇ, ಹುಡುಗ ಹೇಗೆ ಏನು ಒಂದೂ ಕಿವಿಗೆ ಹಾಕಿಕೊಳ್ಳದೆ, ಈ ಅಪ್ಪ ಎನ್ನುವವ ತನ್ನ ಮದುವೆಗೆ ಖರ್ಚು ಮಾಡದೆ ಅವನ ಋಣ ಹರಿಯುವ ಹಠ ಒಂದೇ ಅವಳನ್ನು ಮದುವೆಗೆ ಒಪ್ಪಿಸಿತ್ತು.

ನೋಡಲು ಬಂದ ರಾಜನನ್ನು ಅವಳು ನೋಡಲೂ ಇಲ್ಲ. ಬಲಿ ಕೋಣಕ್ಕೆ ಯಾವ ಒಡೆಯ ಆದರೂ ಒಂದೇ ಅನ್ನುವ ಭಾವ. ಅವಳ ದಷ್ಟ ಪುಷ್ಟ ದೇಹ, ಬೇರೆ ಕಡೆಯಿಂದ ತಿರಸ್ಕೃತನಾದ ರಾಜನಿಗೆ ಈ ಬಡ ಹುಡುಗಿ ತಾನು ಹೇಳಿದಂತೆ ಕೇಳಿಕೊಂಡು ದಾಹ ತೀರಿಸಲು ಅಡ್ಡಿಯಿಲ್ಲ ಅನಿಸಿ ತನ್ನ ಒಪ್ಪಿಗೆ ಮುದ್ರೆ ತಕರಾರಿಲ್ಲದೆ ಒತ್ತಿಬಿಟ್ಟ.

ಇಬ್ಬರಲ್ಲೂ ಯಾವ ಮಧುರ ಭಾವನೆ ಇಲ್ಲದೆಯೇ ಮದುವೆಯೊಂದು ನಿರ್ವಿಘ್ನವಾಗಿ ನಡೆದೇ ಹೋಯಿತು. ಸುಬ್ಬರಾಯರಿಗೆ ಬಿಡುಗಡೆ ಭಾವವಾದರೆ ಶ್ಯಾಮರಾಯರಿಗೆ ತನ್ನ ಕರ್ತವ್ಯ ಮುಗಿಸಿದ ನೆಮ್ಮದಿ ಮತ್ತು ಮುಂದೆ ಒಳ್ಳೆದಾದೀತೆಂಬ ನಿರೀಕ್ಷೆ. ಸದ್ಯ ಮದುವೆ ಮಂಟಪದಲ್ಲಿ ಕುಡಿದು ಬಾರದಿದ್ದುದು ಎಲ್ಲರೆದುರು ಮಾನ ತೆಗೆಯುತ್ತಾನೆಂದು ಹೆದರಿದ್ದೊಂದು ಆಗದಿದ್ದದು ಪುಣ್ಯ.

ನಾಗಲಕ್ಷ್ಮಿ ತವರು ಮನೆ ಬಿಡುವಾಗ ಚೂರೂ ಕಣ್ಣೀರು ಹಾಕಲಿಲ್ಲ. ದೊಡ್ಡಕ್ಕನ್ನ ಬಿಟ್ಟರೆ ಅತ್ತವರೇ ಇಲ್ಲ. ಮನೆ ತುಂಬುವ ಶಾಸ್ತ್ರದಲ್ಲೂ ಅವಳು ಕಲ್ಲು ಗುಂಡಿನಂತೆ ಹೇಳಿದ್ದು ಮಾಡುತ್ತಿದ್ದಳು. ಅಕ್ಕಂದಿರು ಮಾತ್ರ ಬಹಳ ಪ್ರೀತಿಯಿಂದ ಅವಳನ್ನು ಬರಮಾಡಿಕೊಂಡರು.

ಮೊದಲ ರಾತ್ರಿ ನಾಗಲಕ್ಷ್ಮಿಗೆ ಏನೂ ಅನಿಸುತ್ತಿರಲಿಲ್ಲ. ಅಕ್ಕ ಕೊಟ್ಟ ಹಾಲು ಹಿಡಿದು ಕೋಣೆಗೆ ಹೊರಟಾಗ ಜೊತೆಗೆ ಬಂದ ದೊಡ್ಡಕ್ಕ 'ಅವನು ಹೇಳಿದಂತೆ ಕೇಳು ನಾಗೂ ಹಠ ಮಾಡಬೇಡ' ಅಂತ ಪಿಸುಗುಟ್ಟಿದರೆ, ನಾಗಲಕ್ಷ್ಮಿ ವ್ಯಂಗ ನಗು ನಕ್ಕು, 'ಇಷ್ಟು ದಿನ ಮಾಡಿದ್ದೂ ಅದೇ ತಾನೇ' ಎಂದು ಗಟ್ಟಿಯಾಗಿ ಹೇಳಿ ಅವಳಿಗೆ ಮುಜುಗುರ ಆಗುವಂತೆ ಮಾಡಿದಳು. ರಾಜನಿಗಂತೂ ಇದು ಮೊದಲ ರಾತ್ರಿ ಅಲ್ಲ. ಒಳ ಬಂದವಳೇ ಪುಕ್ಕಟೆ ಹೆಣ್ಣು. ನಯ ನಾಜೂಕು ನಾಚಿಕೆ ಏನೂ ಇಲ್ಲದೆ ಹಾಲನ್ನು ಅವನ ಮುಂದೆ ಹಿಡಿದಳು. ರಾಜ ಅದನ್ನು ಬದಿಗಿಟ್ಟು ಅವಳನ್ನು ಎಳೆದುಕೊಂಡ ಹಲ್ಲು ಕಚ್ಚಿದ. ನಾಗಲಕ್ಷ್ಮಿ ಅವನ ಮೃಗೀಯ ವರ್ತನೆಯನ್ನು ಸಹಿಸಿಕೊಂಡಳು. ಎರಗಿದ ಹುಲಿ ಸುಸ್ತಾಗಿ ಮಲಗಿದಾಗ ನಾಗಲಕ್ಷ್ಮಿ ತಿರುಗಿ ಮಲಗಿದಳು. ಆಕೆ ಯೋಚಿಸಿದಳು ಇದೊಂದು ಆಗಿರಲಿಲ್ಲ ಇಷ್ಟು ದಿನ ಅಂತ.

ರಾಜನಿಗೆ ಅವಳ ವಿರೋಧ ಇಲ್ಲದೆಯೂ ಸೋತ ಅನುಭವ. ಅವಳ ಕಣ್ಣಿನ ಆ ನಿರ್ಲಕ್ಷ್ಯ ನೋಟ ಇನ್ನು ಏನು ಮಾಡಿಯೆ ಎಂಬ ತಿರಸ್ಕಾರ ಅವನಿಗೆ ಇದು ಪಾಪದ ಹೆಣ್ಣಲ್ಲ. ಇವಳ ಸೊಕ್ಕು ಇಳಿಸುತ್ತೇನೆ ಎಂದುಕೊಂಡ.

ಬೆಳಿಗ್ಗೆ ಹೊರ ಬರುವಾಗ ನಾಗಲಕ್ಷ್ಮಿ ಮೈ ಕೈಯಲ್ಲೆಲ್ಲಾ ಗಾಯ. ದೊಡ್ಡಕ್ಕನಿಗೆ ಅಯ್ಯೊ ಅನಿಸಿದರೆ ವಾರಗಿತ್ತಿಯರು ಅವರಲ್ಲೆ ಮಾತಾಡಿ ಕೊಂಡರು. ನಾಗಲಕ್ಷ್ಮಿ ಏನೂ ಆಗದವಳಂತೆ ಅಕ್ಕ ಸಂಧ್ಯಾಳ ಎದುರು ನಿಂತು 'ನಂಗೆ ಏನು ಕೆಲಸ ಹೇಳಿಬಿಡಿ ಅಕ್ಕಾ ಎಂದಳು. ಅವಳನ್ನು ಕರುಣೆಯಿಂದ ನೋಡಿ 'ಇರು ನಾಗೂ ನೀನು ಮದುಮಗಳು. ಇವತ್ತು ಪೂಜೆಯಿದೆ. ಗಾಯಕ್ಕೆ ಎಣ್ಣೆ ಹಚ್ಚಿ ಸ್ನಾನ ಮಾಡು' ಎಂದರು. ನಾಗಲಕ್ಷ್ಮಿ ಮಾತಾಡದೆ ಸ್ನಾನಕ್ಕೆ ಹೊರಟಳು. ಅವಳ ಜೊತೆಯಲ್ಲಿ ಕೋಣೆಗೆ ಬಂದು ದೊಡ್ಡಕ್ಕ 'ಎಂತಾ ನಾಗೂ ಇದು. ಅವನೇನು ಮನುಷ್ಯನೋ, ಪ್ರಾಣಿಯೋ? ಆ ಪಾಟಿ ಗಾಯ ಮಾಡಿದ್ದಾನಲ್ಲೇ' ಅಂದಳು.

'ನಾಗಲಕ್ಷ್ಮಿ ಯಾಕಷ್ಟು ಬೇಜಾರು ಮಾಡಿಕೊಳ್ಳಿ ಅಕ್ಕಾ ನಂಗೇನು ಹಿಂಸೆ ಹೊಸದಾ? ಇವನದ್ದು ಟೈಪ್ ಬೇರೆ ಅಷ್ಟೆ' ಎಂದಳು.

'ಇವತ್ತೆಲ್ಲಾ ಬರ್ತಾರಲ್ಲೆ, ನೋಡಿ ಏನಂತಾರೆ ಅಂತಾನೂ ಇಲ್ವಲ್ಲ ಅವನಿಗೆ' ಎಂದಳು. 'ನೋಡಲಿ ಬಿಡಕ್ಕಾ ಮಾನ ಇದ್ರೆ ತಾನೆ ಮರ್ಯಾದೆ ಹೋಗೋದು. ನಂಗೆ ಯಾವುದು ಇಲ್ಲಕ್ಕ, ನೋಡಲಿ ಬಿಡು ಅಮ್ಮ ಅಪ್ಪನೂ ಬರ್ತಾರಲ್ಲಾ ಅವರೂ ಖುಷಿ ಪಡ್ತಾರೆ, ತಮ್ಮ ಹಾಗೇ ಮಗಳನ್ನು ಸಾಕ್ತಾನಂತ. ನೀನೊಬ್ಬಳು ಹುಚ್ಚಿ ಸುಮ್ಮನೇ ಕೊರಗುತ್ತಿ ಬುದ್ಧಿ ಇಲ್ಲ' ಎನ್ನುತ್ತಾ ಸ್ನಾನಕ್ಕೆ ಹೋದಳು.

ನೀರು ಮೈಗೆ ಬಿದ್ದಾಗ ಅವಳಿಗೆ ಉರಿಯಲ್ಲಿ ಜೀವ ಹೋದಂತೆ ಆಯಿತು. ಅವಳು ಹಠದಲ್ಲಿ ಇನ್ನೆರಡು ಚೆಂಬು ನೀರನ್ನು ಗಾಯದ ಮೇಲೆ ಸುರಿದಳು. ಆಗವಳಿಗೆ ಏನೋ ತೃಪ್ತಿ ಅಕ್ಕ ವಾರಗಿತ್ತಿಯರು ಅವಳನ್ನು ಸಿಂಗರಿಸಿದರು. ನೆಂಟರಿಷ್ಟರು ಊರಿಂದ ತಂದೆ ತಾಯಿ ಎಲ್ಲಾ ಬಂದರು. ನಾಗಲಕ್ಷ್ಮಿಯನ್ನು ನೋಡಿ ಅಮ್ಮ ದೊಡ್ಡ ಮಗಳ ಹತ್ತಿರ 'ಎಂತೇ ಇಷ್ಟು ಗಾಯ? ಇಲ್ಲೂ ಒರಟು ಮಾಡುತ್ತೇನೋ. ಇದೊಂದು ಇಲ್ಲಿ ಬಾಳಿದರೆ ಸಾಕು. ಏನಾದರೂ ಮಾಡಿ ಕೊಂಡು ತಿರುಗಿ ಬಂದರೆ ಅಂತ ಹೆದರಿಕೆ' ಎಂದು ಪಿಸುಗುಟ್ಟಿದ್ದರು. ಅಕ್ಕ ವಿಷಾದದಿಂದ, 'ಬಂದರೆ ನೀನೆಲ್ಲಿ ಸೇರಿಸ್ತಿ ಬಿಡಮ್ಮಾ' ಎಂದಳು. ಅಂದಿನ ಕಲಾಪಗಳಿಗೆ ನಾಗಲಕ್ಷ್ಮಿ ಯಾಂತ್ರಿಕವಾಗಿ ಹೇಳಿದ್ದನ್ನು ಮಾಡುತ್ತಿದ್ದಳು. ಊಟ ಮುಗಿಸಿ ಅಮ್ಮ ಅಪ್ಪ ಹೊರಡುವಾಗ ಅಮ್ಮ ಸರಿಯಾಗಿ ಹೊಂದಿಕೊಂಡಿರು ಅಂತೆಲ್ಲಾ ಹೇಳ ಹೊರಟರು. ಅವರ ಮಾತನ್ನು ಅರ್ಧಕ್ಕೆ ಕಟ್ ಮಾಡಿ 'ಹೆದರಬೇಡ ಮತ್ತೆ ನಿನ್ನ ಮನೆಗೆ ಬರುವುದಿಲ್ಲ' ಅಂತ ಅಮ್ಮನ ಮಾತನ್ನು ತುಂಡರಿಸಿದಳು.

ಎಲ್ಲರೂ ಹೊರಟಾಗ ಬಾಗಲಲ್ಲಿ ನಿಂತ ನಾಗಲಕ್ಷ್ಮಿಗೆ ನೆನಪಾಗಿದ್ದು ಕಟುಕನಿಗೆ ಕುರಿಯನ್ನು ಮಾರಿ ಹೊರಟ ಕುರುಬ ಕುರಿಗೆ ತನ್ನನ್ನು ಕಡಿಯುವ ಕಲ್ಪನೆಯಿಲ್ಲ. ತನಗೆ ಮುಂದಿನ ಅರಿವಿದೆ ಅಂದುಕೊಂಡಳು.

ರಾಜನಿಗೆ ನಾಗಲಕ್ಷ್ಮಿ ಒಂದು ಸವಾಲಾಗಿದ್ದಳು. ದಿನ ದಿನಕ್ಕೆ ಅವನು ಎಷ್ಟೇ ಹಿಂಸೆ ಹೆಚ್ಚು ಮಾಡಿದರೂ ಅವಳು ಮಾತ್ರ ತನಗಲ್ಲ ಅಂತಿದ್ದುದು ಅವನಿಗೆ ಸೋಲಾಗಿ ಖಂಡಿತ್ತು. ಕುಡಿದು ಬಂದು ಚಿತ್ರಹಿಂಸೆ ಕೊಡುತ್ತಿದ್ದ ನಾಗಲಕ್ಷ್ಮಿ ಕಣ್ಣೀರು ಹಾಕಿದ್ದರೆ ಅವನ ಕಾಲು ಹಿಡಿದು ಬೇಡಿಕೊಂಡಿದ್ದರೆ ಅವನ ಅಹಂ ತಣಿಯುತ್ತಿತ್ತೇನೊ.

ಎರಡು ವಿಚಿತ್ರ ವ್ಯಕ್ತಿತ್ವಗಳ ಈ ಸಂಬಂಧ ದಿನ ದಿನಕ್ಕೆ ಅಂತರ ಹೆಚ್ಚಾಗುತ್ತಿತ್ತು. ತಾನು ಯಾವುದೋ ಕಾಲದಲ್ಲಿ ಎಡವಿ ದುರ್ವ್ಯಸನಗಳ ದಾಸನಾದ ರಾಜನಿಗೆ ಮನೆಯವರ ನಿರ್ಲಕ್ಷ್ಯ ಮಾತ್ರ ತಡೆಯಲಾಗುತ್ತಿರಲಿಲ್ಲ. ಆದರೆ ತನ್ನ ಹಾದಿಯಿಂದ ಹಿಂದೆ ಬರಲಾರದಷ್ಟು ದೂರ ಅವನು ಹೋಗಿದ್ದ. ಹೆಂಡತಿಯಲ್ಲಿ ಅಂತಹಾ ನಿರೀಕ್ಷೆ ಇರದಿದ್ದರೂ ಅವಳ ಈ ತಟಸ್ಥ ಭಾವ ಅವನನ್ನು ಹಿಂಸಿಸುತ್ತಿತ್ತು.

ನಾಗಲಕ್ಷ್ಮಿಗೆ ತಾಯಿ ತಂದೆ ತನ್ನ ನೋಡುತ್ತಿದ್ದ ರೀತಿಯಿಂದ ಮನುಷ್ಯರ ಮೇಲೆಯೇ ಅಸಹ್ಯ ಭಾವ ಬಂದು ಬಿಟ್ಟಿತ್ತು. ಅದಕ್ಕೆ ಸರಿಯಾಗಿ ತನ್ನ ಮಾವ ತಮ್ಮ ಮಗನ ಎಲ್ಲಾ ಗುಣಗಳು ಗೊತ್ತಿದ್ದೂ ಅವರ ಒಂದು ಪ್ರತಿಷ್ಠೆಗಾಗಿ ತನ್ನ ಖರೀದಿಸಿದ್ದು ನೆನದಾಗ ಅಸಹ್ಯ ಆಗುತ್ತಿತ್ತು. ರಾಜ ಹಿಂಸೆ ಕೊಟ್ಟಷ್ಟು ಅವಳು ಕೊರಡಿನಂತೆ ಇರುತ್ತಿದ್ದಳು.

ಒಂದು ದಿನ ಅವನು ಮುಖ ಮೋರೆ ನೊಡದೆ ಅವಳನ್ನು ಹೊಡೆಯುತ್ತಿದ್ದ. ಒಮ್ಮೆ ಅವನ ಕೈ ಸೋತು ನಿಂತಾಗ ನಾಗಲಕ್ಷ್ಮಿ ತಿರುಗಿ ನಿಂತು ಬೆನ್ನು ತೋರಿಸಿ ಇಲ್ಲಿ ಖಾಲಿ ಇದೆ ಎಂದಿದ್ದಳು. ರಾಜನಿಗೆ ಏನು ಮಾಡಲೂ ತೋಚದೆ ಅವಳನ್ನು ನೂಕಿ ಹೊರಗೆ ಹೋಗಿದ್ದ. ಶ್ಯಾಮರಾಯರಿಗೆ ಸದಾ ಪಾಪ ಪ್ರಜ್ಞೆ ಕಾಡುತ್ತಿತ್ತು. ತನ್ನ ಪ್ರತಿಷ್ಠೆಗಾಗಿ ಒಂದು ಜೀವವನ್ನು ಬಲಿ ತೆಗೆದುಕೊಂಡೆ ಎನ್ನುವ ಕೊರಗಲ್ಲಿ ಅವರು ನರಳುತ್ತಿದ್ದರು.

ಒಂದು ದಿನ ರಾಜ ದಿನಕ್ಕಿಂತ ಮುಂಚಿತವಾಗಿ ಮನೆಗೆ ಬಂದ. ಅವನು ಬರುವಾಗ ಅಣ್ಣ ಅತ್ತಿಗೆಯರು ಒಟ್ಟಾಗಿ ಕುಳಿತು ಊಟ ಮಾಡುತ್ತಿದ್ದರು. ನಾಗಲಕ್ಷ್ಮಿ ಅವರಿಗೆ ಬಡಿಸುತ್ತಿದ್ದಳು. ರಾಜನಿಗೆ ಅದನ್ನು ನೋಡಿ ಮೈ ಉರಿಯಿತು. ನಾಗಲಕ್ಷ್ಮಿ ತನ್ನ ಮೇಲೆ ತೋರುತ್ತಿರುವ ಅನಾದರ ಅಣ್ಣ ಅತ್ತಿಗೆಯರಲ್ಲಿ ತೋರುತ್ತಿಲ್ಲ ಅನ್ನುವ ಭಾವನೆ ಅವನನ್ನು ಕೆರಳಿಸಿತು. ತೂರಾಡುತ್ತಾ ತನ್ನ ಕೋಣೆಗೆ ಹೋದವ ಏ .. ಬಾರೇ ಅಂತ ನಾಗಲಕ್ಷ್ಮಿಯನ್ನು ಕೂಗಿದ. ದಿನದ ರಾತ್ರಿ ನಡೆಯುತ್ತಿರುವ ಅವನ ದುರ್ವರ್ತನೆ ಇಂದು ಈಗಲೇ ಶುರುವಾಗಿದ್ದು ಅಲ್ಲಿ ಇದ್ದವರಿಗೆ ಮುಜುಗರವಾಯಿತು. ಹೋಗು ನಾಗೂ ಎಂದು ಅಕ್ಕಂದಿರು ಹೇಳುತ್ತಿದ್ದರೂ, ನಾಗಲಕ್ಷ್ಮಿ ಕೈಲಿದ್ದ ಅನ್ನ ಬಡಿಸಿಯೇ ಹೋದಳು. ರಾಜನಿಗೆ ಕೋಪ ನೆತ್ತಿಗೇರಿತು. 'ಎಲ್ಲಿ ಸತ್ತಿದ್ದಿಯೇ, ಇವತ್ತು ನಿನಗೊಂದು ಗತಿ ಕಾಣ್ಸೇನಿ' ಎಂದವನೇ ಎದುರು ನಿಂತ ನಾಗಲಕ್ಷ್ಮಿಗೆ ಕೈಲಿದ್ದ ಬಾಟಲಿಯಿಂದ ತಲೆಗೆ ಜೋರಾಗಿ ಕುಟ್ಟಿದ.

ಅವನು ಹೊಡೆದ ರಭಸಕ್ಕೆ 'ಅಯ್ಯೋ ಸತ್ತೆ' ಎನ್ನುವ ಕೂಗು. ಬಾಟಲಿ ಒಡೆದ ಶಬ್ದ. ಅಣ್ಣಂದಿರೂ ಶ್ಯಾಮರಾಯರಿಂದ ಹಿಡಿದು ಎಲ್ಲರೂ ಮೇಲೆ ಓಡಿದರು. ನಾಗಲಕ್ಷ್ಮಿ ಬಿದ್ದಿದ್ದಾಳೆ. ರಕ್ತ ತಲೆಯಿಂದ ಹರಿಯುತ್ತಿದೆ. ತಾಯಿ ಬಂದವರೇ 'ಅಯ್ಯೋ, ತೆಗೆದೇ ಬಿಟ್ಯಾ ಪಾಪೀ' ಎನ್ನುತ್ತಾ ನಾಗಲಕ್ಷ್ಮಿ ಹತ್ತಿರ ಓಡಿದರು.

ನಿಂತವರನ್ನೆಲ್ಲಾ ನೋಡಿದ ರಾಜ ಕೈಲಿದ್ದ ಬಾಟಲಿ ಕೆಳಕ್ಕೆ ಹಾಕಿ ತೂರಾಡುತ್ತಾ ಬಾಗಿಲು ದಾಟಿ ಮುಂಬಾಗಿಲಿಂದ ಹೊರಕ್ಕೆ ಹೊರಟ. 'ಶ್ಯಾಮರಾಯರು ಇನ್ನು ಈ ಹೊಸಿಲು ದಾಟಿ ಒಳ ಬಂದರೆ ನನ್ನ ಹೆಣ